### ಕೃತಿ ಬಿಡುಗಡೆ ಸಮಾರಂಭದಲ್ಲಿ ನ್ಯಾ. ಎಂ ಎನ್ ವೆಂಕಟಾಚಲಯ್ಯ ಪ್ರತಿಪಾದನೆ

# ಸಾಮಾಜಿಕ ಬದಲಾವಣೆಯ ಗ್ರಹಿಕೆ ಸವಾಲು

■ **ವಿಕ ಸುದ್ದಿಲೋಕ** ಬೆಂಗಳೂರು

ವಿಜ್ಞಾನ ಮತ್ತು ತಂತ್ರಜ್ಞಾನ ಜತೆಯಾಗಿ ಸೇರಿಕೊಂಡು ಸಮಾಜವನ್ನು ಕ್ಷಿಪ್ರ ಗತಿಯಲ್ಲಿ ಬದಲಾಯಿಸುತ್ತಿವೆ. ಈ ಬದಲಾವಣೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದೇ ನಾಗರಿಕ ಸೇವೆಯ ಅಧಿಕಾರಿಗಳ ಮುಂದಿರುವ ದೊಡ್ಡ ಸವಾಲಾಗಿದೆ ಎಂದು ನ್ಯಾಯಮೂರ್ತಿ ಎಂ ಎನ್ ವೆಂಕಟಾಚಲಯ್ಯ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಅವರು ಪಬ್ಲಿಕ್ ಅಫೇರ್ಸ್ ಸೆಂಟರ್ ಹೊರತಂದಿರುವ 'ಇನ್ ದಿ ರಿಯರ್ ವ್ಯೂ ಮಿರರ್: ರಿಫ್ಲೆಕ್ಷನ್ಸ್ ಆಫ್ ಚೀಫ್ ಸೆಕ್ರೆಟರೀಸ್' ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದರು.

''ನಾಗರಿಕ ಸೇವೆಗೆ ಬರುವ ಅಧಿಕಾರಿಗಳು ವಿಜ್ಞಾನ ಮತ್ತು ತಂತ್ರಜ್ಞಾನವು ಸಮಾಜದ ಮೇಲೆ ಬೀರುತ್ತಿರುವ ಅಗಾಧ ಪರಿಣಾಮವನ್ನು ಅರಿಯುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಏಕೆಂದರೆ, ತಂತ್ರಜ್ಞಾನವಂತೂ ಪ್ರತಿ ಮೂರು ತಿಂಗಳಿಗೊಮ್ಮೆ ಹೊಸರೂಪದಲ್ಲಿ ಬರುತ್ತಿದೆ. ವಿಜ್ಞಾನದ ಸಂಶೋಧನೆಗಳು ಮನುಷ್ಯನ ಇದುವರೆಗಿನ ಲೆಕ್ಕಾಚಾರಗಳನ್ನೆಲ್ಲ ಬುಡಮೇಲು ಮಾಡುತ್ತಿವೆ. ಹೀಗಾಗಿ, ಅಧಿಕಾರಿಗಳು ಸಮಕಾಲೀನ ಸಮಾಜದ ತುರ್ತುಗಳನ್ನು ಗಮನಿಸಿ, ಅದಕ್ಕೆ ತಕ್ಕ ದಕ್ಷತೆಯನ್ನು ರೂಢಿಸಿಕೊಳ್ಳಬೇಕು,'' ಎಂದು ಅವರು ಸೂಚಿಸಿದರು.

''ತುಂಬಾ ಅಧಿಕಾರಿಗಳು ರಾಜಕಾರಣಿಗಳೊಂದಿಗೆ ವ್ಯವಹರಿಸುವುದು ಕಷ್ಟವೆಂದುಕೊಂಡಿದ್ದಾರೆ. ಆದರೆ, ರಾಜಕಾರಣಿಗಳಿಗಿಂತ ಹೆಚ್ಚಾಗಿ ಸಹೋದ್ಯೋಗಿಗಳನ್ನು ನಿರ್ವಹಿಸುವುದು ಯಾವಾಗಲೂ ಕಷ್ಟ. ದೇಶದಲ್ಲಿ ಸಂವೇದನಾಶೀಲರಾದ ನೂರಾರು ಸಾರ್ವಜನಿಕ ವ್ಯಕ್ತಿಗಳಿದ್ದಾರೆ. ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷನಾಗಿದ್ದಾಗ ನನಗೆ ಇದು ಅನುಭವಕ್ಕೆ ಬಂದಿದೆ,'' ಎಂದು ಅವರು ಹೇಳಿದರು.

''ಅಧಿಕಾರಿಗಳು ರಚನಾತ್ಮಕವಾಗಿ ತಮ್ಮ ಸೇವೆಯಲ್ಲಿ ತೊಡಗಿಕೊಂಡರೆ ಮನ್ವಂತರವನ್ನೇ ಸೃಷ್ಟಿಸಬಹುದು. ಆದರೆ, ವ್ಯವಸ್ಥೆಯ ಸಂಕೀರ್ಣತೆಯನ್ನು ನಾವು ತಳ್ಳಿಹಾಕಬಾರದು. ಅದನ್ನು ಅರಗಿಸಿಕೊಂಡೇ ಮುನ್ನಡೆಯಬೇಕು. ನಮ್ಮಲ್ಲಿ ಅತ್ಯುತ್ತಮವಾದ ಆಲೋಚನೆಗಳಿದ್ದರೆ ರಾಜಕಾರಣಿಗಳು ಅದನ್ನು ಪುರಸ್ಕರಿಸುವುದು ಅನಿವಾರ್ಯವಾಗುತ್ತದೆ,'' ಎಂದು ವೆಂಕಟಾಚಲಯ್ಯ ಅವರು ಪ್ರತಿಪಾದಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್‌ಚಂದ್ರ ಕುಂಟಿಯಾ ''ಯುವಜನರು ಇಂದು ಹೆಚ್ಚಾಗಿ ಸಾಫ್ಟ್ ವೇರ್ ಉದ್ಯಮದತ್ತ ಹೋಗುತ್ತಿದ್ದಾರೆ. ಸಾರ್ವಜನಿಕ ರಂಗದ ನಾಗರಿಕ ಸೇವಾ ವಲಯದತ್ತಲೂ ಯುವ ಜನರನ್ನು ನಾವು ಆಕರ್ಷಿಸಬೇಕಾಗಿದೆ'' ಎಂದರು.

''ನಾಗರಿಕ ಸೇವೆಯ ಅಧಿಕಾರಿಗಳು ಹೆಚ್ಚುಹೆಚ್ಚಾಗಿ ತಮ್ಮ ವೃತ್ತಿಜೀವನದ ಅನುಭವಗಳನ್ನು ಮತ್ತು ನೆನಪುಗಳನ್ನು ದಾಖಲಿಸಬೇಕು. ಇದರಿಂದಾಗಿ ಯುವ ಪೀಳಿಗೆಯ ಅಧಿಕಾರಿಗಳಿಗೆ ಸರಿಯಾದ ಮಾರ್ಗದರ್ಶನ ದೊರೆಯುತ್ತದೆ. ಯುವ ಅಧಿಕಾರಿಗಳನ್ನು ಸಮಾಜಕ್ಕೆ ಉಪಯುಕ್ತವಾದ ರೀತಿಯಲ್ಲಿ ಕೆಲಸ ಮಾಡುವಂತೆ ಹೇಗೆ ಪ್ರೇರೇಪಿಸಬೇಕು ಎನ್ನುವುದು ಈಗ ನಮ್ಮ ಮುಂದಿರುವ ಸವಾಲಾಗಿದೆ,'' ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿಗಳಾದ ಕೌಶಿಕ್ ಮುಖರ್ಜಿ, ಪಿ ಕೆ ಮೊಹಂತಿ, ಜಾಯ್ ಉಮ್ಮನ್, ಸಿ ಕೆ ಮ್ಯಾಥ್ಯೂ, ಸಲಾವುದ್ದೀನ್ ಅಹಮದ್, ಜೆ ಕೆ ಬಂಟಿಯಾ, ಪಬ್ಲಿಕ್ ಅಫೇರ್ಸ್ ಸೆಂಟರ್‌ನ ನಿರ್ದೇಶಕ ಗುರುಚರಣ್ ಗೊಲ್ಲರಕೆರೆ ಉಪಸ್ಥಿತರಿದ್ದರು.




**ಪಬ್ಲಿಕ್ ಅಫೇರ್ಸ್ ಸೆಂಟರ್ ಪ್ರಕಟಿಸಿರುವ ಪುಸ್ತಕದ ಬಿಡುಗಡೆ ಗುರುವಾರ ನಗರದ ಖಾಸಗಿ ಹೋಟೆಲೊಂದರಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಗುರುಚರಣ್ ಗೊಲ್ಲರಕೆರೆ, ನ್ಯಾಯಮೂರ್ತಿ ಎಂ ಎನ್ ವೆಂಕಟಾಚಲಯ್ಯ, ಸುಭಾಷ್ ಕುಂಟಿಯಾ ಮತ್ತು ಡಾ.ಸಿ ಕೆ ಮ್ಯಾಥ್ಯೂ ಉಪಸ್ಥಿತರಿದ್ದರು.**

---

ಪ್ರಜಾ ವಾಣಿ
18/03/2017
ಶನಿವಾರ →

# 'ಐಎಎಸ್ ಅಧಿಕಾರಿಗಳು ಸಮಾಜದ ಋಣ ತೀರಿಸಲಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಐಎಎಸ್ ಅಧಿಕಾರಿಗಳು ಇತರರಿಗಿಂತ ಹೆಚ್ಚಾಗಿ ಸಮಾಜದ ಋಣವನ್ನು ತೀರಿಸಬೇಕು' ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್ ಚಂದ್ರ ಖುಂಟಿಆ ಹೇಳಿದರು.

ಪಬ್ಲಿಕ್ ಅಫೇರ್ಸ್ ಸೆಂಟರ್ (ಪಿಎಸಿ) ವತಿಯಿಂದ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪಿಎಸಿಯ ಸಾರ್ವಜನಿಕ ನೀತಿ ಸಂಶೋಧನಾ ತಂಡದ ಮುಖ್ಯಸ್ಥ ಡಾ.ಸಿ.ಕೆ.ಮ್ಯಾಥ್ಯೂ ಅವರ ಸಂಪಾದಕತ್ವದ 'ಇನ್ ದಿ ರೇರ್ ವಿವ್ ಮಿರರ್: ರಿಫ್ಲೆಕ್ಷನ್ ಆಫ್ ಚೀಫ್ ಸೆಕ್ರೆಟರೀಸ್' ಕೃತಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'1972-79ರ ನಡುವಿನ ಬ್ಯಾಚ್‌ಗಳ ಐಎಎಸ್ ಅಧಿಕಾರಿಗಳು ತಮ್ಮ ಅನುಭವಗಳನ್ನು ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಈ ಕೃತಿ ನಾಗರಿಕ ಸೇವೆಗಳ ಒಳನೋಟಗಳನ್ನು ತೆರೆದಿಡುತ್ತದೆ' ಎಂದರು.

ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಮಾತನಾಡಿ, 'ಹಿರಿಯ ಅಧಿಕಾರಿಗಳಿಗೆ ರಾಜಕಾರಣಿಗಳಿಗಿಂತ ಸಹೋದ್ಯೋಗಿಗಳನ್ನು ನಿಭಾಯಿಸುವುದು ಹೆಚ್ಚು ಕಷ್ಟ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಉತ್ತಮ ಆಡಳಿತ ನೀಡುವ ಜವಾಬ್ದಾರಿ ಅವರ ಮೇಲಿದೆ' ಎಂದರು.



ಕೃತಿಯನ್ನು ಸುಭಾಷ್ ಚಂದ್ರ ಖುಂಟಿಆ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. ಪಿಎಸಿ ನಿರ್ದೇಶಕ ಗುರುಚರಣ್ ಗೊಲ್ಲರಕೇರಿ, ಎಂ.ಎನ್.ವೆಂಕಟಾಚಲಯ್ಯ ಹಾಗೂ ಸಿ.ಕೆ.ಮ್ಯಾಥ್ಯೂ ಇದ್ದಾರೆ –ಪ್ರಜಾವಾಣಿ ಚಿತ್ರ